**1. ಕಲಿಕಾಫಲವಾರು ಅಂಕ ಹಂಚಿಕೆ** **5th 1st sem ಕನ್ನಡ** **2. ಉದ್ದೇಶವಾರು ಅಂಕ ಹಂಚಿಕೆ**

| ಕ್ರ. ಸಂ | ಕಲಿವಿನ ಫಲಗಳು | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ಬುನಾದಿ ಸಾಕ್ಷರತೆ | 4 | 8 | 40 |
| 2 | ಇನ್ನೊಬ್ಬರು ಆಡುವ ಮಾತುಗಳನ್ನು ಧ್ಯಾನಪೂರ್ವಕವಾಗಿ ಆಲಿಸಿ ಪ್ರತಿಕ್ರಿಯೆ ನೀಡುತ್ತಾರೆ ಮತ್ತು ಪ್ರಶ್ನೆಗಳನ್ನು ಕೇಳುತ್ತಾರೆ. | – | – | - |
| 3 | ಕಥೆ, ಕವಿತೆ ಮತ್ತು ಬೇರೆ ವಸ್ತು–ವಿಷಯಗಳನ್ನು ತನ್ನದೇ ರೀತಿಯಲ್ಲಿ ಮತ್ತು ಭಾಷೆಯಲ್ಲಿ ಹೇಳುತ್ತಾ ಅದರಲ್ಲಿ ತನ್ನದೇ ಸ್ವಂತದ ಕಥೆ ವಿಷಯಗಳನ್ನು ಜೋಡಿಸುತ್ತಾರೆ | 1 | 3 | 15 |
| 4 | ಓದಿದ ವಿಷಯ ವಸ್ತು ಮತ್ತು ತಮಗೆ ದೈನಂದಿನ ಜೀವನದಲ್ಲಿ ಸ್ವತಃ ಆದ ಅನುಭವಗಳನ್ನು ಸೇರಿಸಿ ಅವುಗಳಿಂದ ಉಂಟಾದ ಸಂವೇದನಾತ್ಮಕ ವಿಚಾರಗಳನ್ನು ಮೌಖಿಕವಾಗಿ ಅಥವಾ ಲಿಖಿತವಾಗಿ ಅಭಿವ್ಯಕ್ತಿಸುತ್ತಾರೆ. | 1 | 3 | 15 |
| 5 | ಸ್ತರಕ್ಕನುಸಾರವಾಗಿ ಬೇರೆ ವಿಷಯಗಳು, ವ್ಯಕ್ತಿಗಳು, ಕಲೆಗಳು ಮುಂತಾದವುಗಳಲ್ಲಿ ಪ್ರಯೋಗಿಸಿರುವ ಶಬ್ದಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. | 1 | 3 | 15 |
| 6 | ವಿವಿಧ ಪರಿಸ್ಥಿತಿ ಮತ್ತು ಉದ್ದೇಶಗಳಿಗೆ (ಸೂಚನಾ ಫಲಕದಲ್ಲಿ ಹಾಕುವ ಸೂಚನೆಗಳು, ವಸ್ತುಗಳ ಪಟ್ಟಿ, ಕಥೆ, ಕವಿತೆ, ಪತ್ರ ಪ್ರಬಂಧ) ಮುಂತಾದವುಗಳ ಅನು ಸಾರವಾಗಿ ಬರೆಯುತ್ತಾರೆ. | 1 | 3 | 15 |
| | ಒಟ್ಟು | 8 | 20 | 100% |

| ಕ್ರ. ಸಂ | ಉದ್ದೇಶಗಳು | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ಜ್ಞಾನ | 1 | 2 | 10 |
| 2 | ತಿಳಿವಳಿಕೆ | 3 | 6 | 30 |
| 3 | ಅಭಿವ್ಯಕ್ತಿ /ಅನ್ವಯ | 1 | 3 | 15 |
| 4 | ಸೃಜನಶೀಲತೆ | 3 | 9 | 45 |
| | ಒಟ್ಟು | 8 | 20 | 100% |

**3. ಪ್ರಶ್ನಾವಾರು ಅಂಕ ಹಂಚಿಕೆ**

| ಕ್ರ. ಸಂ | ಪ್ರಶ್ನೆಯ ವಿಧ | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ವಸ್ತುನಿಷ್ಟ ಪ್ರಶ್ನೆ | 3 | 6 | 30 |
| 2 | ಕಿರು ಉತ್ತರ ಪ್ರಶ್ನೆ | 3 | 8 | 40 |
| 3 | ದೀರ್ಘ ಉ. ಪ್ರಶ್ನೆ | 2 | 6 | 30 |
| | ಒಟ್ಟು | 8 | 20 | 100 |

**4. ಕಠಿಣತಾವಾರು ಅಂಕ ಹಂಚಿಕೆ**

| ಕ್ರ. ಸಂ | ಪ್ರಶ್ನೆಯ ವಿಧ | ಒಟ್ಟು ಪ್ರಶ್ನೆ | ಒಟ್ಟು ಅಂಕ | ಶೇಕಡಾ |
|---|---|---|---|---|
| 1 | ಸುಲಭ | 2 | 5 | 20 |
| 2 | ಸಾಧಾರಣ | 4 | 9 | 50 |
| 3 | ಕಠಿಣ | 2 | 6 | 30 |
| | ಒಟ್ಟು | 8 | 20 | 100 |

# ನೀಲನಕಾಶೆ

| ಕ್ರ. ಸಂ | ಉದ್ದೇಶಗಳು ಕಲಿವಿನ ಫಲಗಳು | ಜ್ಞಾನ | | | ತಿಳಿವಳಿಕೆ | | | ಅಭಿವ್ಯಕ್ತಿ/ಅನ್ವಯ | | | ಸೃಜನಶೀಲತೆ | | | ಒಟ್ಟು | |
|---|---|---|---|---|---|---|---|---|---|---|---|---|---|---|---|
| | | ವ. | ಕಿ. | ದೀ. | ವ. | ಕಿ. | ದೀ. | ವ. | ಕಿ. | ದೀ. | ವ. | ಕಿ. | ದೀ. | ಪ್ರಶ್ನೆ | ಅಂಕ |
| 1 | ಬುನಾದಿ ಸಾಕ್ಷರತೆ | 1(2) | | | 1(2) 1(2) | 1(2) | | | | | | | | 4 | 8 |
| 2 | ಕಲಿವಿನ ಫಲ 1 | – | – | – | – | – | – | – | – | – | – | – | – | – | – |
| 3 | ಕಲಿವಿನ ಫಲ 2 | | | | | | | | | | | | 1(3) | 1 | 3 |
| 4 | ಕಲಿವಿನ ಫಲ 3 | | | | | | | | | | | | 1(3) | 1 | 3 |
| 5 | ಕಲಿವಿನ ಫಲ 4 | | | | | | | | | | | 1(3) | | 1 | 3 |
| 6 | ಕಲಿವಿನ ಫಲ 5 | | | | | | | | 1(3) | | | | | 1 | 3 |
| | | **1(2)** | | | **2(4)** | **1(2)** | | | **1(3)** | | | **1(3)** | **2(6)** | **8** | |
| | **ಒಟ್ಟು** | **1(2)** | | | **3(6)** | | | **1(3)** | | | **3(9)** | | | | **20** |

**ಸೂಚನೆ :–** 1) **ವ**= ವಸ್ತುನಿಷ್ಟ ಪ್ರಶ್ನೆ, **ಕಿ**= ಕಿರುಉತ್ತರ ಪ್ರಶ್ನೆ, **ದೀ**= ದೀರ್ಘ ಉತ್ತರ ಪ್ರಶ್ನೆ

2) **ಪ್ರಶ್ನೆ(ಅಂಕ)**

**ತರಗತಿ:5** **ಪ್ರಶ್ನಾವಾರು ವಿಶ್ಲೇಷಣೆ** **ವಿಷಯ :ಕನ್ನಡ**

| ಪ್ರಶ್ನೆ ಸಂ. | ಕಲಿಕಾಫಲಗಳು | ಉದ್ದಿಷ್ಠ | ನಿರ್ದಿಷ್ಠ | ಅಂಕ | ಪ್ರಶ್ನೆಯ ರೂಪ | ಕ್ಲಿಷ್ಠತೆ | ಸಮಯ |
|---|---|---|---|---|---|---|---|
| 1 | ಬುನಾದಿ ಸಾಕ್ಷರತೆ | ಗ್ರಹಿಕೆ | ವಾಕ್ಯ ರಚಿಸುತ್ತಾನೆ | 2 | ಕಿರುಉತ್ತರ | ಸಾಧಾರಣ | 4 |
| 2 | ಬುನಾದಿ ಸಾಕ್ಷರತೆ | ಗ್ರಹಿಕೆ | ಪದ ರಚನೆ | 2 | ವಸ್ತುನಿಷ್ಠ | ಸಾಧಾರಣ | 4 |
| 3 | ಬುನಾದಿ ಸಾಕ್ಷರತೆ | ಗ್ರಹಿಕೆ | ಗಾದೆ ರಚಿಸುತ್ತಾನೆ | 2 | ವಸ್ತುನಿಷ್ಠ | ಸುಲಭ | 4 |
| 4 | ಬುನಾದಿ ಸಾಕ್ಷರತೆ | ಜ್ಞಾನ | ಸ್ಮರಿಸುತ್ತಾನೆ | 2 | ವಸ್ತುನಿಷ್ಠ | ಸಾಧಾರಣ | 4 |
| 5 | ಕಲಿವಿನ ಫಲ 2 | ಸೃಜನಶೀಲತೆ | ಕ್ರಿಯಾತ್ಮಕ ಅಭಿವ್ಯಕ್ತಿ | 3 | ದೀರ್ಘಉತ್ತರ | ಕಠಿಣ | 10 |
| 6 | ಕಲಿವಿನ ಫಲ 3 | ಅಭಿವ್ಯಕ್ತಿ | ಲಿಖಿತ ಬರೆವಣಿಗೆ | 3 | ದೀರ್ಘಉತ್ತರ | ಕಠಿಣ | 10 |
| 7 | ಕಲಿವಿನ ಫಲ 4 | ಸೃಜನಶೀಲತೆ | ಮೆಚ್ಚಿ ಬರೆಯುತ್ತಾನೆ | 3 | ಕಿರುಉತ್ತರ | ಸುಲಭ | 5 |
| 8 | ಕಲಿವಿನ ಫಲ 5 | ಅಭಿವ್ಯಕ್ತಿ | ಲಿಖಿತ ಬರೆವಣಿಗೆ | 3 | ಕಿರುಉತ್ತರ | ಸಾಧಾರಣ | 5 |

**ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ________, ____________ ತಾಲ್ಲೂಕು.**

ಸಂಕಲನಾತ್ಮಕ ಮೌಲ್ಯಾಂಕನ–1 ಅಕ್ಟೋಬರ್–2022 ಅಂಕಗಳು :–20

ತರಗತಿ : 5ನೇ ವಿಷಯ : ಕನ್ನಡ ಅವಧಿ :– 45ನಿ

---


**ವಿದ್ಯಾರ್ಥಿಯ ಹೆಸರು:________________________**

1. **ಸರಿಯಾದ ಅರ್ಥ ಬರುವಂತೆ ಪದಗಳನ್ನು ಜೋಡಿಸಿ ವಾಕ್ಯಗಳನ್ನು ಸರಿಪಡಿಸಿ ಬರೆ.** **2x1=2**

ಅ) ಸಮವಸ್ತ್ರ / ಮಕ್ಕಳು / ಧರಿಸಿ / ಬಂದರು / ಶಾಲೆಗೆ

ಆ) ಕೈತೋಟದಲ್ಲಿ / ಶಾಲೆಯ / ಹೂ / ಗಿಡಗಳಿವೆ

2. **'ವನ' ಈ ಪದಕ್ಕೆ ಸಂಬಂಧಿಸಿದ ಪದಗಳನ್ನು ಬಳಸಿ ಪದಜಾಲ ರಚಿಸಿ** **4x1/2=2**




3. **ಈ ಚಿತ್ರಸಹಿತ ಅಪೂರ್ಣ ಗಾದೆಗಳನ್ನು ಓದಿ, ಅವುಗಳ ಪೂರ್ಣ ರೂಪ ಬರೆಯಿರಿ.** **4x1/2=2**

ಅ) ಕ್ಕೆ ಬೇರೆ ಸೀಗೆಕಾಯಿ ________________________

ಆ) ಮೇಲೆ ಆಸೆ, ಮೇಲೆ ಪ್ರೀತಿ ________________________

ಇ) ಅಂಬಲಿ ಕುಡಿಯುವವನಿಗೆ ತಿಕ್ಕುವವನೊಬ್ಬ ________________________

ಈ) ದೂರದ ನುಣ್ಣಗೆ ________________________

4. **ಈ ಕೆಳಗಿನ ಒಗಟುಗಳನ್ನು ಬಿಡಿಸಿ.** **4x1/2=2**


ಅ) ನೀರುಂಟು ಬಾವಿಯಲ್ಲ,ಜುಟ್ಟುಂಟು ಪೂಜಾರಿಯಲ್ಲ,ಮೂರು ಕಣ್ಣುಂಟು ಶಿವನಲ್ಲ.

ಆ) ಅಪ್ಪನ ದುಡ್ಡು ಎಣಿಸೊಕಾಗಲ್ಲ,ಅವ್ವನ ಸೀರೆ ಮಡಿಸೊಕ್ಕಾಗಲ್ಲ

ಇ)ದುಡ್ಡು ಕೊಟ್ಟು ತರುವುದು ಹೆಚ್ಚುತ್ತಾ ಅಳುವುದು

ಈ)ಅಂಗಣ್ಣ ಮಂಗಣ್ಣ ಅಂಗಿ ಬಿಚ್ಚಿಕೊಂಡು ನುಂಗಣ್ಣ

5. **ಮಕ್ಕಳೇ,ಈ ಸರಣಿ ಚಿತ್ರಕ್ಕೆ ಹೊಂದುವಂತಹ ಕಥೆ ರಚಿಸಿ ಇದಕ್ಕೊಂದು ಶೀರ್ಷಿಕೆ ನೀಡಿ.** **3**



6. **ಈ ಕೆಳಗಿನ ಕಥೆಯನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ.** **3x1=3**

ಒಬ್ಬ ವಿಧವೆ. ಸಣ್ಣ ತರಕಾರಿ ಅಂಗಡಿ. ಅದರಿಂದಲೇ ಆಕೆಯ ಜೀವನ ಸಾಗುತ್ತಿತ್ತು. ಅವಳಿಗೆ ಒಬ್ಬನೇ ಮಗ. ಅವನನ್ನು ಓದಿಸಬೇಕೆಂಬ ಹಂಬಲ. ದೊಡ್ಡ ಶಾಲೆಗೆ ಸೇರಿಸಿದ್ದಳು. ಅವನ ಸಹಪಾಠಿಗಳು ಶ್ರೀಮಂತರ ಮಕ್ಕಳು. ತಾಯಿ ಮಗನ ವಿದ್ಯಾಭ್ಯಾಸದ ಬಗ್ಗೆ ತಿಳಿಯಲು ಶಾಲೆಗೆ ಬಂದಳು. ಹರಕಲು ಸೀರೆ, ಬಡಕಲು ಶರೀರದ ಆಕೆಯನ್ನು ನೋಡಿದ ಸಹಪಾಠಿಗಳು ಗೇಲಿ ಮಾಡಿದರು. ಇದರಿಂದ ಅವನಿಗೆ ಅವಮಾನವಾದಂತಾಯಿತು. ಸಾಯಂಕಾಲ ಮನೆಗೆ ಬಂದು ತಾಯಿಯನ್ನು ತರಾಟೆಗೆ ತೆಗೆದುಕೊಂಡನು. ಇನ್ನೊಮ್ಮೆ ಶಾಲೆಯ ಹತ್ತಿರ ಬಾರದಂತೆ ತಾಕೀತು ಮಾಡಿದ.

ದಿನಗಳು ಉರುಳಿದವು. ಮಗ ದೊಡ್ಡವನಾದನು. ಚೆನ್ನಾಗಿ ಓದಿದ. ಹೊರದೇಶಕ್ಕೆ ಹೋದ. ತಾಯಿಯನ್ನು ಮರೆತೇ ಬಿಟ್ಟನು. ಅವನು ಭಾರತಕ್ಕೆ ಬಂದಾಗ ತಾಯಿಯ ಮನೆ ನೆನಪಾಯಿತು. ಊರಿಗೆ ಬಂದ. ತಾಯಿ ಸತ್ತ ಸುದ್ದಿ ತಿಳಿಯಿತು. ಮರುಗಿದ. ಸಾಯುವ ಮುನ್ನ ಒಂದು ಪತ್ರ ಬರೆಸಿ ಮಗ ಬಂದರೆ ಕೊಡಲು ಮನೆಯ ಮಾಲೀಕನಿಗೆ ತಿಳಿಸಿದ್ದಳು. ಅದನ್ನು ಬಿಡಿಸಿ ನೋಡಿದಾಗ "ಮಗು ನೀನು ಚಿಕ್ಕವನಿದ್ದಾಗ ನಡೆದ ಅಪಘಾತದಲ್ಲಿ ಒಂದು ಕಣ್ಣನ್ನು ಕಳೆದುಕೊಂಡಿದ್ದೆ. ಎಲ್ಲರೂ ನಿನ್ನನ್ನು ಕುರುಡ ಎಂದು ಕರೆಯಬಾರದೆಂದು ವೈದ್ಯರಲ್ಲಿಗೆ ಹೋದೆನು. ನನ್ನ ಕಣ್ಣನ್ನು ತೆಗೆದು ನಿನಗೆ ಹಾಕಲು ಹೇಳಿದೆ, ಅವರು ಆಗುವುದಿಲ್ಲ ಎಂದರು. ಆಗ ಸತ್ತ ನಂತರ ದಾನ ಮಾಡಿದ್ದ ಬೇರೊಬ್ಬರ ಕಣ್ಣನ್ನು ನಿನಗೆ ಕಸಿ ಮಾಡಿದರು. ಚಿಕಿತ್ಸೆಗೆ ಕೊಡಬೇಕಾದ ಹಣಕ್ಕಾಗಿ ನಾನು ಕೊನೆ ಉಸಿರು ಇರುವವರೆಗೆ ದುಡಿದು ತೀರಿಸಿದ್ದೇನೆ. ನೀನು ಎಲ್ಲಿಯೇ ಇರು ಚೆನ್ನಾಗಿರು. ಇದೆ ನನ್ನ ಹರಕೆ ಪತ್ರ."

ಇದನ್ನು ಓದಿ ಅವನ ಕಣ್ಣಲ್ಲಿ ನೀರು ಬಂದಿತು. ಇಂತಹ ತಾಯಿಯನ್ನು ಸರಿಯಾಗಿ ನೋಡಿಕೊಳ್ಳಲಿಲ್ಲ. ಎಂದು ದುಃಖಿಸಿದನು.

**ಪ್ರಶ್ನೆಗಳು:-**

ಅ)ಮಗನ ಸಹಪಾಠಿಗಳು ತಾಯಿಯನ್ನು ಏಕೆ ಗೇಲಿ ಮಾಡಿದರು?

ಆ)ಮಗನು ದೊಡ್ಡವನಾದ ಮೇಲೆ ತಾಯಿಯನ್ನು ಮರೆತಿದ್ದು ಸರಿಯೇ?ಏಕೆ?

ಇ)ಈ ಕಥೆಯಲ್ಲಿ ಯಾರು ನಿನಗೆ ಇಷ್ಟವಾದರು?ಏಕೆ?

7. **ಇಲ್ಲಿ ನೀಡಲಾಗಿರುವ ಪೋಸ್ಟರ್‌ನ್ನು ಗಮನಿಸಿ ಕೇಳಲಾಗಿರುವ ಪ್ರಶ್ನೆಗಳಿಗೆ ಉತ್ತರಿಸಿ.** **3x1=3**




**ಪ್ರಶ್ನೆಗಳು:-**

ಅ)ಈ ಚಲನಚಿತ್ರದ ಹೆಸರೇನು?

ಆ)ಈ ಸಿನಿಮಾದಲ್ಲಿ ನಟಿಸಿರುವ ಬಾಲನಟನ ಪಾತ್ರದ ಹೆಸರೇನು?

ಇ)ಈ ಸಿನಿಮಾದಲ್ಲಿ ನಟಿಸಿರುವ ಬಾಲನಟನ ನಿಜವಾದ ಹೆಸರೇನು?

8. **ಕೆಳಗಿನ ಚಿತ್ರಗಳನ್ನು ಗಮನಿಸಿ ಅವುಗಳಿಗೆ ಸರಿಹೊಂದುವ ಸೂಚನಾಫಲಕಗಳನ್ನು ರಚಿಸು.** **3x1=3**

ಅ)



ಆ)



ಇ)



# ಮಾದರಿ ಉತ್ತರ ಪತ್ರಿಕೆ

ಸಂಕಲನಾತ್ಮಕ ಮೌಲ್ಯಾಂಕನ–1 ಅಕ್ಟೋಬರ್–2022 ಅಂಕಗಳು :–20

ತರಗತಿ : 5ನೇ ವಿಷಯ : ಕನ್ನಡ ಅವಧಿ :– 45ನಿ

**ವಿದ್ಯಾರ್ಥಿಯ ಹೆಸರು:**______________________

1. **ಸರಿಯಾದ ಅರ್ಥ ಬರುವಂತೆ ಪದಗಳನ್ನು ಜೋಡಿಸಿ ವಾಕ್ಯಗಳನ್ನು ಸರಿಪಡಿಸಿ ಬರೆ.** **2x1=2**

ಅ) ಮಕ್ಕಳು ಶಾಲೆಗೆ ಸಮವಸ್ತ್ರ ಧರಿಸಿ ಬಂದರು.

ಆ) ಶಾಲೆಯ ಕೈತೋಟದಲ್ಲಿ ಹೂ ಗಿಡಗಳಿವೆ

2. **ಪ್ರಾಣಿ, ನದಿ, ಪಕ್ಷಿ, ಭಯ, ಶಬ್ದ, ಕತ್ತಲು, ಮರ** **2**

3. **ಈ ಚಿತ್ರಸಹಿತ ಅಪೂರ್ಣ ಗಾದೆಗಳನ್ನು ಓದಿ, ಅವುಗಳ ಪೂರ್ಣ ರೂಪ ಬರೆಯಿರಿ.** **2**

ಅ) ಕ್ಕೆ ಬೇರೆ ಸೀಗೆಕಾಯಿ — **ಗಡ್ಡಕ್ಕೆ ಬೇರೆ ಸೀಗೆಕಾಯಿ**

ಆ) ಮೇಲೆ ಆಸೆ, ಮೇಲೆ ಪ್ರೀತಿ — **ಅಕ್ಕಿ ಮೇಲೆ ಆಸೆ,ನೆಂಟರ ಮೇಲೆ ಪ್ರೀತಿ**

ಇ) ಅಂಬಲಿ ಕುಡಿಯುವವನಿಗೆ ತಿಕ್ಕುವವನೊಬ್ಬ — **ಅಂಬಲಿ ಕುಡಿಯುವವನಿಗೆ ಮೀಸೆ ತಿಕ್ಕುವವನೊಬ್ಬ**

ಈ) ದೂರದ ನುಣ್ಣಗೆ — **ದೂರದ ಬೆಟ್ಟ ನುಣ್ಣಗೆ**

4. **ಈ ಕೆಳಗಿನ ಒಗಟುಗಳನ್ನು ಬಿಡಿಸಿ.** **2**

ಅ)ನೀರುಂಟು ಬಾವಿಯಲ್ಲ,ಜುಟ್ಟುಂಟು ಪೂಜಾರಿಯಲ್ಲ,ಮೂರು ಕಣ್ಣುಂಟು ಶಿವನಲ್ಲ. — **ತೆಂಗಿನಕಾಯಿ**

ಆ)ಅಪ್ಪನ ದುಡ್ಡು ಎಣಿಸೊಕಾಗಲ್ಲ,ಅವ್ವನ ಸೀರೆ ಮಡಿಸೊಕ್ಕಾಗಲ್ಲ — **ನಕ್ಷತ್ರ, ಆಕಾಶ**

ಇ)ದುಡ್ಡು ಕೊಟ್ಟು ತರುವುದು ಹೆಚ್ಚುತ್ತಾ ಅಳುವುದು — **ಈರುಳ್ಳಿ**

ಈ)ಅಂಗಣ್ಣ ಮಂಗಣ್ಣ ಅಂಗಿ ಬಿಚ್ಚಿಕೊಂಡು ನುಂಗಣ್ಣ — **ಬಾಳೆಹಣ್ಣು**

5. **ಮಕ್ಕಳೇ,ಈ ಸರಣಿ ಚಿತ್ರಕ್ಕೆ ಹೊಂದುವಂತಹ ಕಥೆ ರಚಿಸಿ.** **3**



**ಒಂದು ಮೈದಾನದ ನಡುವೆ ದೊಡ್ಡದಾದ ಕಾಲುವೆ ಇತ್ತು. ಆ ಕಾಲುವೆಗೆ ಸಣ್ಣದಾದ ಸೇತುವೆಯೊಂದಿತ್ತು. ಆ ಸೇತುವೆಯ ಮೇಲೆ ಒಂದು ಸಾರಿ ಒಬ್ಬರು ಮಾತ್ರ ನಡೆದು ಹೋಗಲು ಅವಕಾಶವಿತ್ತು. ಆ ಕಾಲುವೆಯ ಎರಡು ದಡಗಳಲ್ಲಿ ಎರಡು ಮೇಕೆಗಳು ಮೇಯುತ್ತಿದ್ದವು. ಸಂಜೆಯಾಗುತ್ತಿದ್ದಂತೆ ಆ ಎರಡು ಮೇಕೆಗಳು ಕಾಲುವೆ ದಾಟಿ ಮನೆ ಕಡೆ ಹೋಗಲು ಸಿದ್ಧವಾದವು.**

**ಎರಡೂ ಮೇಕೆಗಳು ಕಾಲುವೆ ದಾಟಲು ಸೇತುವೆಯ ಮಧ್ಯೆ ಎದುರಾಗಿ ಬಂದು ನಿಂತವು. ಮುಂದೆ ಸೇತುವೆ ದಾಟಲು ದಾರಿಯಿಲ್ಲದೆ ಕಂಗಾಲಾದವು. ಇಬ್ಬರೂ ನಾನು ಮೊದಲು ಹೋಗಬೇಕು ಎಂದು ಜಗಳವಾಡತೊಡಗಿದರು. ಅದರಲ್ಲಿ ಅಪಾಯದ ಸುಳಿವನ್ನು ಅರಿತ ಚಿಕ್ಕ ಮೇಕೆ ಒಂದು ಉಪಾಯ ಮಾಡಿತು.ಚಿಕ್ಕ ಮೇಕೆಯು ದೊಡ್ಡ ಮೇಕೆಗೆ ನಾನು**

**ಸೇತುವೆ ಮೇಲೆ ಕುಳಿತುಕೊಳ್ಳುವೆ. ನೀನು ನನ್ನ ಮೇಲೆ ದಾಟಿ ಹೋಗು. ಆನಂತರ ನಾನು ಹೋಗುವೆ ಎಂದು ಹೇಳಿತು.ಆಗ ದೊಡ್ಡ ಮೇಕೆಯು ಇಲ್ಲ ಇಲ್ಲ ನಾನೇ ಕುಳಿತುಕೊಳ್ಳುವೆ. ನೀನು ನನ್ನ ಮೇಲೆ ದಾಟಿ ಹೋಗು ಎಂದು ಹೇಳಿತು.ಹೀಗೆ ಒಂದಕ್ಕೊಂದು ಸಹಕಾರ ಮತ್ತು ಬುದ್ಧಿವಂತಿಕೆಯಿಂದ ಸೇತುವೆಯನ್ನು ದಾಟಿ ಮನೆ ಸೇರಿದವು.**

**6. ಈ ಕೆಳಗಿನ ಕಥೆಯನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ. 3x1=3**

ಒಬ್ಬ ವಿಧವೆ. ಸಣ್ಣ ತರಕಾರಿ ಅಂಗಡಿ. ಅದರಿಂದಲೇ ಆಕೆಯ ಜೀವನ ಸಾಗುತ್ತಿತ್ತು. ಅವಳಿಗೆ ಒಬ್ಬನೇ ಮಗ. ಅವನನ್ನು ಓದಿಸಬೇಕೆಂಬ ಹಂಬಲ. ದೊಡ್ಡ ಶಾಲೆಗೆ ಸೇರಿಸಿದ್ದಳು. ಅವನ ಸಹಪಾಠಿಗಳು ಶ್ರೀಮಂತರ ಮಕ್ಕಳು. ತಾಯಿ ಮಗನ ವಿದ್ಯಾಭ್ಯಾಸದ ಬಗ್ಗೆ ತಿಳಿಯಲು ಶಾಲೆಗೆ ಬಂದಳು. ಹರಕಲು ಸೀರೆ, ಬಡಕಲು ಶರೀರದ ಆಕೆಯನ್ನು ನೋಡಿದ ಸಹಪಾಠಿಗಳು ಗೇಲಿ ಮಾಡಿದರು. ಇದರಿಂದ ಅವನಿಗೆ ಅವಮಾನವಾದಂತಾಯಿತು. ಸಾಯಂಕಾಲ ಮನೆಗೆ ಬಂದು ತಾಯಿಯನ್ನು ತರಾಟೆಗೆ ತೆಗೆದುಕೊಂಡನು. ಇನ್ನೊಮ್ಮೆ ಶಾಲೆಯ ಹತ್ತಿರ ಬಾರದಂತೆ ತಾಕೀತು ಮಾಡಿದ.

ದಿನಗಳು ಉರುಳಿದವು. ಮಗ ದೊಡ್ಡವನಾದನು. ಚೆನ್ನಾಗಿ ಓದಿದ. ಹೊರದೇಶಕ್ಕೆ ಹೋದ. ತಾಯಿಯನ್ನು ಮರೆತೇ ಬಿಟ್ಟನು. ಅವನು ಭಾರತಕ್ಕೆ ಬಂದಾಗ ತಾಯಿಯ ಮನೆ ನೆನಪಾಯಿತು. ಊರಿಗೆ ಬಂದ. ತಾಯಿ ಸತ್ತ ಸುದ್ದಿ ತಿಳಿಯಿತು. ಮರುಗಿದ. ಸಾಯುವ ಮುನ್ನ ಒಂದು ಪತ್ರ ಬರೆಸಿ ಮಗ ಬಂದರೆ ಕೊಡಲು ಮನೆಯ ಮಾಲೀಕನಿಗೆ ತಿಳಿಸಿದ್ದಳು. ಅದನ್ನು ಬಿಡಿಸಿ ನೋಡಿದಾಗ "ಮಗು ನೀನು ಚಿಕ್ಕವನಿದ್ದಾಗ ನಡೆದ ಅಪಘಾತದಲ್ಲಿ ಒಂದು ಕಣ್ಣನ್ನು ಕಳೆದುಕೊಂಡಿದ್ದೆ. ಎಲ್ಲರೂ ನಿನ್ನನ್ನು ಕುರುಡ ಎಂದು ಕರೆಯಬಾರದೆಂದು ವೈದ್ಯರಲ್ಲಿಗೆ ಹೋದೆನು. ನನ್ನ ಕಣ್ಣನ್ನು ತೆಗೆದು ನಿನಗೆ ಹಾಕಲು ಹೇಳಿದೆ, ಅವರು ಆಗುವುದಿಲ್ಲ ಎಂದರು. ಆಗ ಸತ್ತ ನಂತರ ದಾನ ಮಾಡಿದ್ದ ಬೇರೊಬ್ಬರ ಕಣ್ಣನ್ನು ನಿನಗೆ ಕಸಿ ಮಾಡಿದರು. ಚಿಕಿತ್ಸೆಗೆ ಕೊಡಬೇಕಾದ ಹಣಕ್ಕಾಗಿ ನಾನು ಕೊನೆ ಉಸಿರು ಇರುವವರೆಗೆ ದುಡಿದು ತೀರಿಸಿದ್ದೇನೆ. ನೀನು ಎಲ್ಲಿಯೇ ಇರು ಚೆನ್ನಾಗಿರು. ಇದೆ ನನ್ನ ಹರಕೆ ಪತ್ರ."

ಇದನ್ನು ಓದಿ ಅವನ ಕಣ್ಣಲ್ಲಿ ನೀರು ಬಂದಿತು. ಇಂತಹ ತಾಯಿಯನ್ನು ಸರಿಯಾಗಿ ನೋಡಿಕೊಳ್ಳಲಿಲ್ಲ. ಎಂದು ದುಃಖಿಸಿದನು.

**ಪ್ರಶ್ನೆಗಳು:–**

ಅ)ಮಗನ ಸಹಪಾಠಿಗಳು ತಾಯಿಯನ್ನು ಏಕೆ ಗೇಲಿ ಮಾಡಿದರು?

**ಶ್ರೀಮಂತಿಕೆಯಲ್ಲಿಯೇ ಬೆಳೆದ ಅವನ ಸಹಪಾಠಿಗಳಿಗೆ ಬಡತನದ ಪರಿಜ್ಞಾನ ಇರಲಿಲ್ಲ ಅವನ ತಾಯಿಯ ಹರುಕಲು ಸೀರೆ ಬಡಕಲು ಶರೀರವನ್ನು ನೋಡಿ ಅವನ ಸಹಪಾಠಿಗಳು ಅವನನ್ನು ಗೇಲಿ ಮಾಡಿದರು.**

ಆ)ಮಗನು ದೊಡ್ಡವನಾದ ಮೇಲೆ ತಾಯಿಯನ್ನು ಮರೆತಿದ್ದು ಸರಿಯೇ?ಏಕೆ?

**ಇಲ್ಲ. ಮಗನ ಏಳಿಗೆಗಾಗಿ ತನ್ನ ಜೀವನವನ್ನೇ ಮುಡುಪಾಗಿಟ್ಟು ಹಗಲಿರುಳೆನ್ನದೆ ದುಡಿದು ಅವನ ಪ್ರಗತಿಯಲ್ಲೇ ಸಂತೋಷವನ್ನು ಕಂಡ ತಾಯಿಯನ್ನು ಪ್ರೀತಿಯಿಂದ ಸಲುಹ ಬೇಕಾಗಿದ್ದು ಮಗನ ಜವಾಬ್ದಾರಿಯಾಗಬೇಕು ಆದರೆ ಮಗ ಅದಕ್ಕೆ ವಿರುದ್ಧವಾಗಿ ವರ್ತಿಸಿದ ಹಾಗಾಗಿ ಇಲ್ಲಿ ಮಗನ ವರ್ತನೆ ಸರಿ ಇಲ್ಲ.**

ಇ)ಈ ಕಥೆಯಲ್ಲಿ ಯಾರು ನಿನಗೆ ಇಷ್ಟವಾದರು?ಏಕೆ?

**ತಾಯಿ, ಏಕೆಂದರೆ ನನಗೆ ಎಷ್ಟೇ ಕಷ್ಟವಾದರೂ ಮಗ ಚೆನ್ನಾಗಿರಬೇಕು ಅವನಿಗೆ ಯಾವ ತೊಂದರೆಯೂ ಆಗಬಾರದೆಂದು ತನ್ನೆಲ್ಲ ನೋವುಗಳನ್ನು ನುಂಗಿ ಸಲುತ್ತಾಳೆ. ಇದುವೇ ತಾಯಿಯ ಪ್ರೀತಿ.**

7. ಇಲ್ಲಿ ನೀಡಲಾಗಿರುವ ಪೋಸ್ಟರ್‌ನ್ನು ಗಮನಿಸಿ ಕೇಳಲಾಗಿರುವ ಪ್ರಶ್ನೆಗಳಿಗೆ ಉತ್ತರಿಸಿ. **3x1=3**




**ಪ್ರಶ್ನೆಗಳು:-**

ಅ)ಈ ಚಲನಚಿತ್ರದ ಹೆಸರೇನು?**ಚಿನ್ನಾರಿಮುತ್ತ**

ಆ)ಈ ಸಿನಿಮಾದಲ್ಲಿ ಬಾಲನಟನನ್ನು ಯಾವ ಹೆಸರಿನಿಂದ ಕರೆಯುತ್ತಿದ್ದರು?**ಮುತ್ತ**

ಇ)ಈ ಸಿನಿಮಾದಲ್ಲಿ ನಟಿಸಿರುವ ಬಾಲನಟನ ನಿಜವಾದ ಹೆಸರೇನು? **ವಿಜಯ್ ರಾಘವೇಂದ್ರ**

8. ಕೆಳಗಿನ ಚಿತ್ರಗಳನ್ನು ಗಮನಿಸಿ ಅವುಗಳಿಗೆ ಸರಿಹೊಂದುವ ಸೂಚನಾಫಲಕಗಳನ್ನು ರಚಿಸು. **3x1=3**

ಅ)



ಆ)



ಇ)



ಅ)ನೀರು ಪೋಲು ಮಾಡಬಾರದು

ಆ)ಸಾಲಾಗಿ ಬನ್ನಿ

ಇ)ಕಸವನ್ನು ಕಸದ ತೊಟ್ಟಿಯಲ್ಲಿಯೇ ಹಾಕಿ